| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| 1 | ಚುಕ್ಕೆ ಗುರುತಿನ ಸಂಖ್ಯೆ | 1102 |
| 2. | ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 25-02-2022 |
| 4 | ಉತ್ತರಿಸಬೇಕಾದ ಸಚಿವರು | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1 | ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆಡಿಪಿ) ಸಭೆಯ ಮಾರ್ಗಸೂಚಿಗಳು ಯಾವುವು;<br>ಈ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸಿರುತ್ತಾರೆ ಈ ಸಭೆಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಜನ ಪ್ರತಿನಿಧಿಗಳು ಯಾರು;<br>ಈ ಸಭೆಗೆ ಯಾವ ಯಾವ ಇಲಾಖಾ ಅಧಿಕಾರಿ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ:<br>(ಇಲಾಖಾವಾರು ಪಟ್ಟಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ಪಿಡಿ 309 ಪಿಟಿಪಿ 94, ದಿನಾಂಕ: 07-08-1995 ರಂತೆ (ಪ್ರತಿ ಲಗತ್ತಿಸಿದೆ) ರಾಜ್ಯ ಮಟ್ಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರುಗಳು ಪ್ರತಿ **ತ್ರೈಮಾಸಿಕವಾಗಿ** ನಡೆಯುವ ಕೆ.ಡಿ.ಪಿ ಸಭೆಗೆ ಅಧ್ಯಕ್ಷರುಗಳಾಗಿರುತ್ತಾರೆ.<br>ಅದೇ ರೀತಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧ ಹಂತದ ಪರಿಶೀಲನೆಯನ್ನು ಪ್ರತಿ **ಮಾಹೆ** ನಡೆಸಲು ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಮಾಸಿಕವಾಗಿ ನಡೆಯುವ ಕೆ.ಡಿ.ಪಿ ಸಭೆಗೆ ಅಧ್ಯಕ್ಷರುಗಳಾಗಿರುತ್ತಾರೆ.<br>ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳು ನಾಮ ನಿರ್ದೇಶನ ಮಾಡುವ ಸಚಿವರುಗಳು, ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ ಜಿಲ್ಲೆಯಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯಸಭೆ ಮತ್ತು ಲೋಕಸಭೆ ಸದಸ್ಯರುಗಳು) ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕಿನ ಭಾಗಗಳನ್ನು ಪ್ರತಿ ನಿಧಿಸುವ ತಾಲ್ಲೂಕಿನಲ್ಲಿ ವಾಸವಾಗಿರುವ ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ತಾಲ್ಲೂಕಿನಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು ರಾಜ್ಯಸಭೆ ಮತ್ತು ಲೋಕಸಭೆ ಸದಸ್ಯರುಗಳು) ಈ ಸಭೆಗೆ ಸದಸ್ಯರುಗಳಾಗಿರುತ್ತಾರೆ.<br>ಸರ್ಕಾರದ ಆದೇಶದ ಸೂಚನೆಯಂತೆ ಕ್ರಮವಹಿಸಲಾಗಿದೆ. (ಇಲಾಖಾವಾರು ಪಟ್ಟಿಯನ್ನು ಲಗತ್ತಿಸಿದೆ). |
| 2 | ಈ ಸಭೆಯ ಶಿಷ್ಟಾಚಾರ ಯಾವುದು; (ಪ್ರತಿಯನ್ನು ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ ಪಿಡಿ 309 ಪಿಟಿಪಿ 94, ದಿನಾಂಕ:07-08-1995 ರಂತೆ ಕ್ರಮವಹಿಸಲಾಗುತ್ತಿದೆ. |
| 3 | ಕೆ.ಡಿ.ಪಿ ಸಭೆಗಳಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು ; | ಕೆ.ಡಿ.ಪಿ ಸಭೆಗಳಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿರುವ ಯಾವ ಪ್ರಕರಣಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಪಿಡಿಎಸ್ 10 ಐಪಿಆರ್ 2022

(ಮುನಿರತ್ನ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1102ರ ಉತ್ತರಕ್ಕೆ ಪೂರಕ ಟಿಪ್ಪಣಿ**

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವವನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಎಲ್ಲಾ ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ/ಪ್ರಗತಿ ಪರಿಶೀಲನೆಯು ಸರ್ಕಾರದ ಒಂದು ಪ್ರಮುಖ ಕಾರ್ಯವಾಗಿರುತ್ತದೆ. ಈ ಸಂಬಂಧ ಸದರಿ ಕಾರ್ಯಕ್ರಮಗಳ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮತ್ತು ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ರಾಜ್ಯಮಟ್ಟ, ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲನೆ ನಡೆಸುವಂತೆ ಸರ್ಕಾರದ ಆದೇಶ ಸಂಖ್ಯೆ: ಪಿಡಿ 309 ಪಿಟಿಪಿ 94, ದಿನಾಂಕ: 07-08-1995 ರಂದು ಸರ್ಕಾರವು ಆದೇಶ ಹೊರಡಿಸಿರುತ್ತದೆ. ಕ್ರಮವಾಗಿ ಸದರಿ ಆದೇಶದಲ್ಲಿ ತಿಳಿಸಿರುವಂತೆ ಎಲ್ಲಾ ಹಂತಗಳಲ್ಲಿಯೂ ಕೆ.ಡಿ.ಪಿ ಸಭೆಗಳನ್ನು ನಡೆಸಲಾಗುತ್ತಿದೆ.

ಸರ್ಕಾರಿ ಸುತ್ತೋಲೆ ಸಂಖ್ಯೆ: ಯೋಇ 126 ಯೋವಿವಿ 2016, ದಿನಾಂಕ:26.10.2016ರಲ್ಲಿ (ಪ್ರತಿ ಲಗತ್ತಿಸಿದೆ) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶನಗೊಳಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆಯನ್ವಯ ಜಿಲ್ಲಾ ಮಟ್ಟದ ತ್ರೈಮಾಸಿಕ ಸಮಿತಿ ಸಭೆಗೆ (ಕೆ.ಡಿ.ಪಿ) ಐದು ವಿವಿಧ ವರ್ಗಗಳ ಅಂದರೆ, ಪರಿಶಿಷ್ಟ ಜಾತಿ/ಪಂಗಡ-1, ಸಾಮಾನ್ಯ ವರ್ಗ-1, ಹಿಂದುಳಿದ ವರ್ಗ-1, ಅಲ್ಪಸಂಖ್ಯಾತ-1 ಹಾಗೂ 01 ಮಹಿಳಾ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಅದೇ ರೀತಿ ತಾಲ್ಲೂಕು ಮಟ್ಟದ ಕೆ.ಡಿ.ಪಿ ಸಮಿತಿಗೆ ಆರು ವಿವಿಧ ವರ್ಗಗಳ ಅಂದರೆ, ಪರಿಶಿಷ್ಟ ಜಾತಿ/ಪಂಗಡ-1, ಸಾಮಾನ್ಯ ವರ್ಗ-2, ಹಿಂದುಳಿದ ವರ್ಗ-1, ಅಲ್ಪಸಂಖ್ಯಾತ-1 ಹಾಗೂ 01 ಮಹಿಳಾ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಅಂತಹ ಪ್ರಸ್ತಾವನೆಗಳನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸಬೇಕಾಗಿರುತ್ತದೆ ಹಾಗೂ ಅರ್ಜಿ ನಮೂನೆಯಲ್ಲಿ ಪ್ರಸ್ತಾಪಿಸಲ್ಪಡುವಂತಹ ಅಭ್ಯರ್ಥಿಗಳ ಪೂರ್ವಾಪರಗಳನ್ನು ಆಯಾ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಧಾನಸಭಾ ಸದಸ್ಯರು ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ದೃಢೀಕರಿಸಿ ಸಲ್ಲಿಸಬೇಕಿರುತ್ತದೆ.

ಅದರಂತೆ ಪ್ರಸ್ತಾವನೆಗಳು ಸ್ವೀಕೃತಗೊಂಡಾಗ, ಸುತ್ತೋಲೆಯನ್ವಯ ಪರಿಶೀಲಿಸಿ, ಮಾನ್ಯ ಇಲಾಖಾ ಸಚಿವರ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ಅನುಮೋದನೆಗಾಗಿ ಕರಡು ಅಧಿಸೂಚನೆಯನ್ನು ಸಲ್ಲಿಸಲಾಗುವುದು ಅಥವಾ ನೇರವಾಗಿ ಮಾನ್ಯ ಮುಖ್ಯಮಂತ್ರಿಯವರಿಂದ ಅನುಮೋದನೆಗೊಂಡ ಪ್ರಸ್ತಾವನೆ ಸ್ವೀಕೃತವಾದಲ್ಲಿ, ಸುತ್ತೋಲೆಯನ್ವಯ ಅಭ್ಯರ್ಥಿಗಳ ಪ್ರವರ್ಗಗಳು ಸರಿಯಿದ್ದಲ್ಲಿ, ಅಧಿಸೂಚನೆಯನ್ನು ಹೊರಡಿಸಲು ಕ್ರಮ ವಹಿಸಲಾಗುವುದು.

ರಾಜ್ಯಮಟ್ಟದ ಕೆ.ಡಿ.ಪಿ ಸಭೆಯನ್ನು ಪ್ರತಿ ತಿಂಗಳು ಸರ್ಕಾರದ ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಇಲಾಖೆಗಳ ಪ್ರಮುಖ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ತಪ್ಪದೇ ನಡೆಸಲಾಗುತ್ತಿದೆ. ಸದರಿ ಸಭೆಯಲ್ಲಿ ಎಲ್ಲಾ ಇಲಾಖೆಗಳ ಅಪರ ಮುಖ್ಯಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಹಾಜರಿದ್ದು, ಪ್ರಗತಿ ವಿವರಗಳ ಕುರಿತು ಸುದೀರ್ಘ ಚರ್ಚೆ ನಡೆಸಿ, ಕಡಿಮೆ ಪ್ರಗತಿ ಸಾಧಿಸಿರುವ ಇಲಾಖೆಗಳಿಗೆ ಉತ್ತಮ ಪ್ರಗತಿ ಸಾಧಿಸಲು ಅಗತ್ಯ ಸಲಹೆ/ ಸೂಚನೆಗಳನ್ನು ನೀಡಲಾಗುತ್ತಿದೆ.

ರಾಜ್ಯ ಮಟ್ಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು ಅಧ್ಯಕ್ಷರುಗಳಾಗಿರುತ್ತಾರೆ.

ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳು ನಾಮ ನಿರ್ದೇಶನ ಮಾಡುವ ಸಚಿವರುಗಳು, ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯ ಸಭೆ ಮತ್ತು ಲೋಕಸಭೆ ಸದಸ್ಯರುಗಳು ಮತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕಿನ ಭಾಗಗಳನ್ನು ಪ್ರತಿ ನಿಧಿಸುವ ತಾಲ್ಲೂಕಿನಲ್ಲಿ ವಾಸವಾಗಿರುವ ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ತಾಲ್ಲೂಕಿನಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯ ಸಭೆ ಮತ್ತು ಲೋಕಸಭೆ) ಕೆ.ಡಿ.ಪಿ ಸಭೆಯ ಸದಸ್ಯರುಗಳಾಗಿರುತ್ತಾರೆ.

ಎಲ್ಲಾ ಇಲಾಖಾಧಿಕಾರಿಗಳು ಕಡ್ಡಾಯವಾಗಿ ಸಭೆಗೆ ಹಾಜರಾಗುವುದು.

# ಕೆ.ಡಿ.ಪಿ ವ್ಯಾಪ್ತಿಯಡಿ ಒಳಪಡುವ ಇಲಾಖೆಗಳು

| ಕ್ರಮ ಸಂಖ್ಯೆ | ಇಲಾಖೆಯ ಹೆಸರು |
|---|---|
| 01 | ಆಹಾರ, ನಾಗರೀಕ ಸರಬರಾಜು |
| 02 | ಆರ್ಥಿಕ |
| 03 | ಇಂಧನ |
| 04 | ವೈದ್ಯಕೀಯ ಶಿಕ್ಷಣ |
| 05 | ವಿಪತ್ತುನಿರ್ವಹಣೆ |
| 06 | ಸಾರಿಗೆ |
| 07 | ಸಹಕಾರ |
| 08 | ವಾಣಿಜ್ಯ ಮತ್ತು ಕೈಗಾರಿಕೆ (ಬೃಹತ್) |
| 09 | ಜಲಸಂಪನ್ಮೂಲ |
| 10 | ಸಣ್ಣನೀರಾವರಿ |
| 11 | ಕೃಷಿ |
| 12 | ಲೋಕೋಪಯೋಗಿ |
| 13 | ಅರಣ್ಯ, ಜೀವಿಶಾಸ್ತ್ರ, ಪರಿಸರ |
| 14 | ಕೌಶಲ್ಯಾಭಿವೃದ್ಧಿ |
| 15 | ಪಶುಪಾಲನ |
| 16 | ನಗರಾಭಿವೃದ್ಧಿ |
| 17 | ಕಾರ್ಮಿಕ |
| 18 | ಉನ್ನತ ಶಿಕ್ಷಣ |
| 19 | ಪ್ರಾಥಮಿಕ/ಪ್ರೌಢಶಿಕ್ಷಣ |
| 20 | ಕಾನೂನು |
| 21 | ಗ್ರಾಮೀಣಾಭಿವೃದ್ಧಿ |
| 22 | ರೇಷ್ಮೆ |
| 23 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, |

# ಕೆ.ಡಿ.ಪಿ ವ್ಯಾಪ್ತಿಯಡಿ ಒಳಪಡುವ ಇಲಾಖೆಗಳು

| | |
|---|---|
| 24 | ಇ-ಆಡಳಿತ |
| 25 | ಮೂಲಭೂತ ಸೌಕರ್ಯ |
| 26 | ಮೀನುಗಾರಿಕೆ |
| 27 | ಅಲ್ಪಸಂಖ್ಯಾತರ, |
| 28 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| 29 | ವಾಣಿಜ್ಯ ಕೈಗಾರಿಕೆ (ಸಣ್ಣ,ಜವಳಿ) |
| 30 | ಸಿ.ಆ.ಸು.ಇ (ಆಡಳಿತ ಸುಧಾರಣೆ) |
| 31 | ಹಿಂದುಳಿದ ವರ್ಗಗಳ |
| 32 | ಒಳಾಡಳಿತ |
| 33 | ಯುವ ಸಬಲೀಕರಣ |
| 34 | ತೋಟಗಾರಿಕಾ |
| 35 | ಸಮಾಜ ಕಲ್ಯಾಣ |
| 36 | ಕಂದಾಯ |
| 37 | ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯ |
| 38 | ವಾರ್ತಾ |
| 39 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ |
| 40 | ವಸತಿ |
| 41 | ಯೋಜನೆ |
| 42 | ಕನ್ನಡ, ಸಂಸ್ಕೃತಿ |
| 43 | ಪ್ರವಾಸೋಧ್ಯಮ |
| 44 | ಮಾಹಿತಿ ತಂತ್ರಜ್ಞಾನ, |
| 45 | ಸಾರ್ವಜನಿಕ ಉದ್ದಿಮೆ |

**ಕರ್ನಾಟಕ ಸರ್ಕಾರ**

ಸಂಖ್ಯೆ:ಯೋಇ 126 ಯೋಅವಿ 2016

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:26.10.2016

**ಸುತ್ತೋಲೆ**

ವಿಷಯ: ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ(ಕೆ.ಡಿ.ಪಿ.) ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 309 ಪಿಟಿಪಿ 94, ದಿನಾಂಕ:07.08.1995

2. ಸರ್ಕಾರದ ಸುತ್ತೋಲೆ ಸಂಖ್ಯೆ: ಯೋಇ 71 ಯೋಅವಿ 2014 ದಿನಾಂಕ:07.11.2014.

***

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ಉಲ್ಲೇಖಿತ-1ರ ಆದೇಶದನ್ವಯ ರಚಿಸಲಾಗಿದೆ. ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ (ಕೆ.ಡಿ.ಪಿ.)ಗಳಿಗೆ 5 ವಿವಿಧ ವರ್ಗಗಳ ಅಂದರೆ ಪರಿಶಿಷ್ಟ ಜಾತಿ/ಪಂಗಡ-1, ಸಾಮಾನ್ಯ ವರ್ಗ-1, ಹಿಂದುಳಿದ ವರ್ಗ-1, ಅಲ್ಪಸಂಖ್ಯಾತ ವರ್ಗ-1, ಹಾಗೂ 1 ಮಹಿಳಾ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ತಾಲ್ಲೂಕು ಮಟ್ಟದ ತ್ರೈಮುಸಿಕ ಪರಿಶೀಲನಾ ಸಮಿತಿ (ಕೆ.ಡಿ.ಪಿ.)ಗೆ 6 ವಿವಿಧ ವರ್ಗಗಳ ಅಂದರೆ ಪರಿಶಿಷ್ಟ ಜಾತಿ/ಪಂಗಡ-1, ಸಾಮಾನ್ಯ ವರ್ಗ-2, ಹಿಂದುಳಿದ ವರ್ಗ-1, ಅಲ್ಪಸಂಖ್ಯಾತ ವರ್ಗ-1, ಹಾಗೂ 1 ಮಹಿಳಾ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇಂತಹ ನಾಮನಿರ್ದೇಶನಗಳನ್ನು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿಯಿಂದ ಪರಿಶೀಲನೆಗೊಳಪಟ್ಟು, ದೃಢೀಕರಿಸಿ ಉಲ್ಲೇಖಿತ 2ರ ಲ್ಲಿನ ಸುತ್ತೋಲೆ ಹಾಗೂ ಅರ್ಜಿ ನಮೂನೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿತ್ತು. ಸದ್ಯ ಈ ಪದ್ಧತಿಯನ್ನು ಕೈಬಿಡಲಾಗಿದೆ.

ಇನ್ನು ಮುಂದೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ (ಕೆ.ಡಿ.ಪಿ.) ಸಮಿತಿಗಳಿಗೆ ಸರ್ಕಾರದಿಂದ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಉದ್ದೇಶವುಳ್ಳ ಪ್ರಸ್ತಾವನೆಗಳನ್ನು ಈ ಸುತ್ತೋಲೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಸಲ್ಲಿಸಬೇಕಾಗುವುದು. ಈ ಅರ್ಜಿ ನಮೂನೆಯಲ್ಲಿ ಪ್ರಸ್ತಾಪಿಸಲ್ಪಡುವಂತಹ ಅಭ್ಯರ್ಥಿಗಳ ಪೂರ್ವಾಪರಗಳನ್ನು, ತಾಲ್ಲೂಕು ಕೆ.ಡಿ.ಪಿ. ಸಭೆಗೆ ಆಯಾ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಧಾನಸಭಾ ಸದಸ್ಯರು ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ದೃಢೀಕರಿಸಿ ಸಲ್ಲಿಸುವುದು ಹಾಗೂ ಜಿಲ್ಲಾ ಕೆ.ಡಿ.ಪಿ. ಸಭೆಗೆ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ನಿಗದಿತ ಅರ್ಜಿ ನಮೂನೆಯಲ್ಲಿ ದೃಢೀಕರಿಸಿ ನೇರವಾಗಿ ಯೋಜನಾ ಸಚಿವಾಲಯಕ್ಕೆ ಕಳುಹಿಸಿಕೊಡಬೇಕೆಂದು ಈ ಮೂಲಕ ಕೋರಲಾಗಿದೆ.

(ರಫೀ ಅಹಮದ್. ಎಂ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-1&2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಬೆಂಗಳೂರು, ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ತಕ್ಷಣ ಪ್ರಕಟಿಸಲು.

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.

...2

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು.
5. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
6. ಕಾರ್ಯದರ್ಶಿಗಳು ವಿಧಾನ ಸಭೆ/ ವಿಧಾನ ಪರಿಷತ್( ಮಾನ್ಯ ಶಾಸಕಾಂಗದ ಸದಸ್ಯರಿಗೆ ಮಾಹಿತಿಗಾಗಿ)
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
8. ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿಯವರು,ವಿಧಾನಸೌಧ, ಬೆಂಗಳೂರು.
9. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕಾಧಿಕಾರಿಗಳು.
10. ಎಲ್ಲಾ ಮಾನ್ಯ ಸಚಿವರುಗಳ/ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
12. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
14. ಶಾಖಾಧಿಕಾರಿ, ಸ್ವೀಮರ ಶಾಖೆ, ಯೋಜನಾ ಇಲಾಖೆ (ಕಾಂಪೆಂಡಿಯಮ್‌ಗೋಸ್ಕರ).
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

***

## ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಮಿತಿಗಳಿಗೆ ನಾಮನಿರ್ದೇಶನಕ್ಕಾಗಿ ಪ್ರಸ್ತಾಪಿಸಿರುವ ಅಭ್ಯರ್ಥಿಗಳ ಸ್ವವಿವರಗಳು.

**(ಸುತ್ತೋಲೆ ಸಂಖ್ಯೆ: ಯೋಇ 126 ಯೋಎವಿ 2016, ದಿನಾಂಕ:26.10.2016)**

**ಅರ್ಜಿ ನಮೂನೆ**

| ಕ್ರ.ಸಂ. | ವಿವರಗಳು | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ತಂದೆಯ ಹೆಸರು | |
| 3 | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 4 | ಮನೆ ವಿಳಾಸ | |
| 5 | ವಿದ್ಯಾರ್ಹತೆ | |
| 6 | ಯಾವ ಪ್ರವರ್ಗಕ್ಕೆ ಸೇರಿದವರು: (ಸಾಮಾನ್ಯ, ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ವರ್ಗ, ಮಹಿಳೆ) | |
| 7 | ಗುರುತಿನ ಚೀಟಿ ವಿವರ (ಮತದಾರರ ಗುರುತಿನ ಚೀಟಿ ಸಂಖ್ಯೆ ಅಥವಾ ಆಧಾರ್ ಕಾರ್ಡ್ ಸಂಖ್ಯೆ) | |

**ಘೋಷಣೆ**

ನಾನು ಯಾವುದೇ ನ್ಯಾಯಾಲಯದಿಂದ ಶಿಕ್ಷೆಗೆ ಒಳಪಟ್ಟಿರುವುದಿಲ್ಲ ಮತ್ತು ನನ್ನ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಅಭ್ಯರ್ಥಿಯ ಸಹಿ

ಶಿಫಾರಸ್ಸು ಮಾಡುವ ಗಣ್ಯರು: ______________________________

ಸಹಿ ಮತ್ತು ಮೊಹರು

ದಿನಾಂಕ:

ಸ್ಥಳ:

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ, ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ ರಚಿಸುವ ಬಗ್ಗೆ.

ಂ ಂ ಂ

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 212 ಪಿಎಂಎಂ 87, ದಿನಾಂಕ:12.10.1987.
2. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 37 ಸಿಇಪಿ 89, ದಿನಾಂಕ:3.1.1990.
3. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 34 ಸಿಇಪಿ 89, ದಿನಾಂಕ:26.4.1990.
4. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 235 ಸಿಓಪಿ 93, ದಿನಾಂಕ:21.2.1994.
5. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 309 ಪಿಟಿಪಿ 94, ದಿನಾಂಕ:19.12.1994.

ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ(1)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನದ ಜಿಲ್ಲಾಮಟ್ಟದ ಮತ್ತು ತಾಲ್ಲೂಕುಮಟ್ಟದ ಸಮಿತಿಗಳನ್ನು ಪುನರ ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (2)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮಗಳನ್ನೊಳಗೊಂಡಂತೆ) ಕರ್ನಾಟಕ 20 ಅಂಶ ಕಾರ್ಯಕ್ರಮವೆಂದು ಪುನರ ನಾಮಾಂಕಿತಗೊಳಿಸಿತ್ತು. ಮೇಲೆ ಕ್ರಮಸಂಖ್ಯೆ (3)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾಮಟ್ಟದ ಮತ್ತು ತಾಲ್ಲೂಕುಮಟ್ಟದ ಸಮಿತಿಗಳನ್ನು ಪರಿಷ್ಕರಿಸಿ ರಚಿಸುವ ಬಗ್ಗೆ ಮತ್ತು ರಾಜ್ಯಮಟ್ಟದ ಉನ್ನತಾಧಿಕಾರ ಸಮಿತಿಯನ್ನು ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (4)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮತ್ತು ತಾಲ್ಲೂಕುಮಟ್ಟದ ಸಮಿತಿಗಳಲ್ಲಿ ಸದಸ್ಯತ್ವವನ್ನು ವಿಸ್ತರಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (5)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಶಾಸಕರುಗಳು ಮತ್ತು ಅಧಿಕಾರೇತರ ಸದಸ್ಯರುಗಳಿರುವ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುವ ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳ ಮತ್ತು ತಾಲ್ಲೂಕು ಕೇಂದ್ರ ಕಾರ್ಯಸ್ಥಾನದ ವಿಧಾನ ಸಭಾ ಚುನಾವಣಾ ಕ್ಷೇತ್ರದ ವಿಧಾನ ಸಭಾ ಸದಸ್ಯರು ಅಧ್ಯಕ್ಷರಾಗಿರುವ ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಎಲ್ಲಾ ತಾಲ್ಲೂಕು ಮಟ್ಟದ ಸಮಿತಿಗಳ ಕಾರ್ಯ ನಿರ್ವಹಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಿತ್ತು.

2. ಸರ್ಕಾರವು ಈ ವಿಷಯವನ್ನು ಪರಿಗಣಿಸಿ ವಿವಿಧ ಹಂತದ ಪರಿಶೀಲನೆಯಲ್ಲಿ 20 ಅಂಶ ಕಾರ್ಯಕ್ರಮ ಮಾತ್ರವಲ್ಲದೆ ಇತರೆ ಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಲು ತೀರ್ಮಾನಿಸಿದೆ.

3. ಆದ್ದರಿಂದ ಸರ್ಕಾರವು ಮೇಲಿನ ಕ್ರಮಸಂಖ್ಯೆ 1 ರಿಂದ 5ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶಗಳನ್ನು ರದ್ದುಗೊಳಿಸಿ ಕೆಳಕಂಡ ಆದೇಶವನ್ನು ಹೊರಡಿಸುತ್ತದೆ.

## ಸರ್ಕಾರಿ ಆದೇಶ ಸಂಖ್ಯೆ:ಪಿಡಿ 309 ಪಿಟಿಪಿ 94,

## ಬೆಂಗಳೂರು : ದಿನಾಂಕ : 7ನೇ ಆಗಸ್ಟ್ 1995.

ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಎಂದು ಪುನರ ನಾಮಾಂಕಿತಗೊಳಿಸಲಾಗಿದೆ.

2. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಅನುಕ್ರಮವಾಗಿ ಕೆಳಕಂಡಂತೆ ರಚಿಸಿರುವ ಸಮಿತಿಗಳು ವಿವಿಧ ಹಂತಗಳಲ್ಲಿ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸತಕ್ಕದ್ದು. ಈ ಸಮಿತಿಗಳ ಸ್ವರೂಪವು ಈ ಕೆಳಗಿನಂತಿದೆ:—

...2.

ತೋರಿಸಿರುವಂತೆ ಇರುತ್ತದೆ:

ಅ. <u>ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಉನ್ನತ ಅಧಿಕಾರ ಸಮಿತಿ.</u>

| | |
|---|---|
| i) ಮುಖ್ಯಮಂತ್ರಿಗಳು | ಅಧ್ಯಕ್ಷರು. |
| ii) ಹಣಕಾಸು ಮತ್ತು ಯೋಜನಾ ಸಚಿವರು | ಉಪಾಧ್ಯಕ್ಷರು. |
| iii) ಮುಖ್ಯಮಂತ್ರಿಗಳು ನಾಮನಿರ್ದೇಶನ ಮಾಡುವ ಸಚಿವರುಗಳು | ಸದಸ್ಯರುಗಳು. |
| iv) ಸರ್ಕಾರದ ಮುಖ್ಯ ಕಾರ್ಯದರ್ಶಿ | ಸದಸ್ಯರು. |
| v) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು. |
| vi) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಸದಸ್ಯರು. |
| vii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು. |
| viii) ಸರ್ಕಾರದ ಕಾರ್ಯದರ್ಶಿ, ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯ ಕಾರ್ಯದರ್ಶಿ. |
| ix) ಸಂಬಂಧಪಟ್ಟ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರುಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು | ಆಹ್ವಾನಿತರು. |

ಆ. <u>ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ.</u>

| | |
|---|---|
| i) ಜಿಲ್ಲಾ ಉಸ್ತುವಾರಿ ಸಚಿವರು | ಅಧ್ಯಕ್ಷರು. |
| ii) ಅಧ್ಯಕ್ಷರು, ಜಿಲ್ಲಾ ಪಂಚಾಯತ್ | ಉಪಾಧ್ಯಕ್ಷರು. |
| iii) ಜಿಲ್ಲೆಯನ್ನು : ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ: ಜಿಲ್ಲೆಯಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯ ಸಭೆ ಮತ್ತು ಲೋಕ ಸಭೆ) | ಸದಸ್ಯರುಗಳು. |
| iv) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್ | ಸದಸ್ಯರು. |
| v) ಜಿಲ್ಲೆಯಲ್ಲಿನ ತಾಲ್ಲೂಕುಗಳನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರುಗಳು | ಸದಸ್ಯರುಗಳು. |
| vi) ಜಿಲ್ಲೆಯಲ್ಲಿ ವಾಸವಾಗಿರುವ : ಜಿಲ್ಲೆಯನ್ನು : ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ ವಿಧಾನಪರಿಷತ್ ಸದಸ್ಯರುಗಳು | ಸದಸ್ಯರುಗಳು. |
| vii) ಜಿಲ್ಲಾ ಪಂಚಾಯತಿಗಳ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು. | ಸದಸ್ಯರುಗಳು. |
| viii) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ | ಸದಸ್ಯರು. |
| ix) ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ | ಸದಸ್ಯರು. |
| x) ಧಾರ್ಮಿಕ ಅಲ್ಪಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ | ಸದಸ್ಯರು. |
| xi) ಸಾಮಾನ್ಯ ವರ್ಗಕ್ಕೆ ಸೇರಿದ ಸಮಾಜ ಸೇವಾ ಕರ್ತರ ಒಬ್ಬ ಪ್ರತಿನಿಧಿ. | ಸದಸ್ಯರು: |
| xii) ಒಬ್ಬ ಮಹಿಳಾ ಪ್ರತಿನಿಧಿ | ಸದಸ್ಯರು. |

. . . 3.

| | |
|---|---|
| xiii) ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪ್ರತಿನಿಧಿ (ಪ್ರತಿನಿಧಿಯನ್ನು ಬ್ಯಾಂಕ ನಾಮನಿರ್ದೇಶನ ಮಾಡತಕ್ಕದ್ದು) | ಸದಸ್ಯರು. |
| xiv) ಡಿ.ಸಿ.ಸಿ.ಬ್ಯಾಂಕಿನ ಅಧ್ಯಕ್ಷರು | ಸದಸ್ಯರು. |
| xv) ಜಿಲ್ಲಾಧಿಕಾರಿ | ಸದಸ್ಯರು. |
| xvi) ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು | ಸದಸ್ಯರುಗಳು. |
| xvii) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯ ಕಾರ್ಯದರ್ಶಿ. |
| xviii) ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು | ಆಹ್ವಾನಿತರು. |
| xix) ಎಲ್ಲಾ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳ, ಸಾರ್ವಜನಿಕ ವಲಯ ಉದ್ಯಮಗಳ ಮತ್ತು ಶಾಸನಬದ್ಧ ನಿಕಾಯಗಳ ಜಿಲ್ಲಾಮಟ್ಟದ ಅಧಿಕಾರಿಗಳು | ಆಹ್ವಾನಿತರು. |
| xx) ಲೀಡ್ ಬ್ಯಾಂಕ ಅಧಿಕಾರಿ. | ಆಹ್ವಾನಿತರು. |

೨. <u>ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ.</u>

| | |
|---|---|
| i) ತಾಲ್ಲೂಕಿನಲ್ಲಿ ಅತಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು | ಅಧ್ಯಕ್ಷರು. |
| ii) ತಾಲ್ಲೂಕಿನ ಉಳಿದ ಭಾಗಗಳನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರುಗಳು | ಸಹ- ಅಧ್ಯಕ್ಷರುಗಳು. |
| iii) ತಾಲ್ಲೂಕನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ: ತಾಲ್ಲೂಕಿನಲ್ಲಿ ವಾಸವಾಗಿರುವ ವಿಧಾನ ಪರಿಷತ್ತಿನ ಸದಸ್ಯರುಗಳು | ಸದಸ್ಯರುಗಳು |
| iv) ತಾಲ್ಲೂಕನ್ನು: ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ: ತಾಲ್ಲೂಕಿನಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯಸಭೆ ಮತ್ತು ಲೋಕಸಭೆ) | ಸದಸ್ಯರುಗಳು |
| v) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ | ಸದಸ್ಯರು |
| vi) ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ | ಸದಸ್ಯರು |
| vii) ಧಾರ್ಮಿಕ ಅಲ್ಪಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ | ಸದಸ್ಯರು |
| viii) ಸಾಮಾನ್ಯ ವರ್ಗಕ್ಕೆ ಸೇರಿದ ಸಮಾಜ ಸೇವಾಕರ್ತರ ಇಬ್ಬರು ಪ್ರತಿನಿಧಿಗಳು | ಸದಸ್ಯರುಗಳು |
| ix) ಒಬ್ಬ ಮಹಿಳಾ ಪ್ರತಿನಿಧಿ | ಸದಸ್ಯರು |
| x) ಪಿಸಿಎಆರ್‌ಡಿ ಬ್ಯಾಂಕ್ ಅಧ್ಯಕ್ಷರು | ಸದಸ್ಯರು |
| xi) ಉಪ ವಿಭಾಗಾಧಿಕಾರಿ (ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ತಾಲ್ಲೂಕುಗಳಲ್ಲಿ ಒಂದೇ ದಿನ ಒಂದಕ್ಕಿಂತ ಹೆಚ್ಚು ಸಮಿತಿ ಸಭೆಗಳನ್ನು ಕರೆಯಲಾಗಿದ್ದರೆ ಯಾವುದೇ ತಾಲ್ಲೂಕು ಸಮಿತಿಯ ಸಭೆಯಲ್ಲಿ ಭಾಗವಹಿಸುವ ಆಯ್ಕೆಯ ಅವಕಾಶ ಉಪ ವಿಭಾಗಾಧಿಕಾರಿಯವರಿಗೆ ಇರುತ್ತದೆ) | ಸದಸ್ಯರು |
| xii) ಟಿ.ಎ.ಪಿ.ಸಿ.ಎಂ.ಎಸ್.ಅಧ್ಯಕ್ಷರು | ಸದಸ್ಯರು |
| xiii) ಡಿಸಿಸಿ ಬ್ಯಾಂಕಿನ ತಾಲ್ಲೂಕು ಮಟ್ಟದ ಪ್ರತಿನಿಧಿ | ಸದಸ್ಯರು |
| xiv) ತಹಶೀಲ್ದಾರ್ | ಸದಸ್ಯರು |
| xv) ಕ್ಷೇತ್ರಾಭಿವೃದ್ಧಿ ಅಧಿಕಾರಿ | ಸದಸ್ಯರು |
| xvi) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ | ಸದಸ್ಯ ಕಾರ್ಯದರ್ಶಿ |
| xvii) ಎಲ್ಲಾ ಸಂಬಂಧಪಟ್ಟ ಇಲಾಖೆಗಳ: ಸಾರ್ವಜನಿಕ ಉದ್ಯಮಗಳ: ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳ: ತಾಲ್ಲೂಕು ಮಟ್ಟದ ಅಧಿಕಾರಿಗಳು | ಆಹ್ವಾನಿತರು |

... 4

3. ಇದಲ್ಲದೆ, ಕೆಳಕಂಡಂತೆ ರಚಿಸಿರುವ ಸಮಿತಿಗಳು ಅನುಕ್ರಮವಾಗಿ ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧ ಹಂತದ ಪರಿಶೀಲನೆಯನ್ನು ಪ್ರತಿ ತಿಂಗಳೂ ನಡೆಸತಕ್ಕದ್ದು. ಈ ಸಮಿತಿಗಳ ಸ್ವರೂಪವು ಅವುಗಳ ಮುಂದೆ ತೋರಿಸಿರುವಂತೆ ಇರುತ್ತದೆ.

ಅ. <u>ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಮಾಸಿಕ ಪರಿಶೀಲನಾ ಸಮಿತಿ.</u>

| | |
|---|---|
| i) ಸರ್ಕಾರದ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷರು |
| ii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು |
| iii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಸದಸ್ಯರು |
| iv) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| v) ಸಂಬಂಧಪಟ್ಟ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು | ಸದಸ್ಯರುಗಳು |
| vi) ನಿರ್ದೇಶಕರು, ಪಿಎಂಐ ವಿಭಾಗ, ಯೋಜನಾ, ಸಾಂಖ್ಯಿಕ ಹುಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯ ಕಾರ್ಯದರ್ಶಿ |
| vii) ಎಲ್ಲಾ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳು: ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು | ಆಹ್ವಾನಿತರು |

ಆ. <u>ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.</u>

| | |
|---|---|
| i) ಅಧ್ಯಕ್ಷರು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| ii) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್ | ಉಪಾಧ್ಯಕ್ಷರು |
| iii) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| iv) ಜಿಲ್ಲಾಧಿಕಾರಿ | ಸದಸ್ಯರು |
| v) ಜಿಲ್ಲಾ ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು | ಸದಸ್ಯರುಗಳು |
| vi) ಮುಖ್ಯ ಯೋಜನಾ ಅಧಿಕಾರಿ, ಜಿಲ್ಲಾ ಪಂಚಾಯತ | ಸದಸ್ಯ ಕಾರ್ಯದರ್ಶಿ |
| vii) ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು | ಆಹ್ವಾನಿತರು |
| viii) ಎಲ್ಲಾ ಸಂಬಂಧಪಟ್ಟ ಸಾರ್ವಜನಿಕ ವಲಯ ಉದ್ಯಮಗಳ: ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳ: ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು | ಆಹ್ವಾನಿತರು |
| ix) ಲೀಡ ಬ್ಯಾಂಕ ಅಧಿಕಾರಿ | ಆಹ್ವಾನಿತರು |

ಇ. <u>ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವೂ ಸೇರಿದಂತೆ) ಪರಿಣಾಮಕಾರಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.</u>

| | |
|---|---|
| i) ಅಧ್ಯಕ್ಷರು, ತಾಲ್ಲೂಕು ಪಂಚಾಯತ್ | ಅಧ್ಯಕ್ಷರು |
| ii) ಉಪಾಧ್ಯಕ್ಷರು, ತಾಲ್ಲೂಕು ಪಂಚಾಯತ್ | ಉಪಾಧ್ಯಕ್ಷರು |
| iii) ತಹಶೀಲ್ದಾರ | ಸದಸ್ಯರು |
| iv) ತಾಲ್ಲೂಕು ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು | ಸದಸ್ಯರುಗಳು |
| v) ಕ್ಷೇತ್ರಾಭಿವೃದ್ಧಿ ಅಧಿಕಾರಿ | ಸದಸ್ಯರು |
| vi) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ ಪಂಚಾಯತ | ಸದಸ್ಯ ಕಾರ್ಯದರ್ಶಿ |
| vii) ಎಲ್ಲಾ ಸಂಬಂಧಪಟ್ಟ ಅಭಿವೃದ್ಧಿ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು | ಆಹ್ವಾನಿತರು. |

...5

viii) ಎಲ್ಲಾ ಸಂಬಂಧಪಟ್ಟ ಸಾರ್ವಜನಿಕ ವಲಯದ ಉದ್ಯಮಗಳ
ತಾಲ್ಲೂಕು ಮಟ್ಟದ ಅಧಿಕಾರಿಗಳು: ಶಾಸನಬದ್ಧ ನಿಕಾಯಗಳ
ತಾಲ್ಲೂಕು ಮಟ್ಟದ ಅಧಿಕಾರಿಗಳು — ಆಹ್ವಾನಿತರು

4. ಕಂಡಿಕೆ 3(ಇ) ನಲ್ಲಿ ರಚಿಸಿರುವ ತಾಲ್ಲೂಕುಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳು 5ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 5ನೇ ತಾರೀಖು ರಜೆಯ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಗೈರು ಹಾಜರಿಯಲ್ಲಿ ತಾಲ್ಲೂಕು ಪಂಚಾಯತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯು ಸಭೆ ನಡೆಸತಕ್ಕದ್ದು. ಈ ಇಬ್ಬರ ಗೈರು ಹಾಜರಿಯಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸತಕ್ಕದ್ದು.

5. ಕಂಡಿಕೆ 3(ಆ)ನಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳೂ 11ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 11ನೇ ತಾರೀಖು ರಜಾ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ಜಿಲ್ಲಾ ಪಂಚಾಯತಿಯ ಅಧ್ಯಕ್ಷರ ಗೈರು ಹಾಜರಿಯಲ್ಲಿ, ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರತಕ್ಕದ್ದು. ಈ ಇಬ್ಬರ ಗೈರು ಹಾಜರಿಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿಯು ಸಭೆ ನಡೆಸತಕ್ಕದ್ದು.

6. ಅಧಿಕಾರೇತರ ಸದಸ್ಯರುಗಳ ಪ್ರಯಾಣ ಭತ್ಯೆಗಳನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಸರ್ಕಾರಿ ಆದೇಶ ಸಂ:ಎಫ್‌ಡಿ 18 ಎಸ್‌ಆರ್‌ಎಸ್ 94, ದಿನಾಂಕ:30.12.94ರ ಅನುಸಾರವಾಗಿ ನಿರ್ಧರಿಸುವುದು. ಈಗಿನಂತೆಯೇ ಪ್ರಯಾಣ ಭತ್ಯೆಗಳನ್ನು ಎಲ್ಲಾ ಜಿಲ್ಲಾ ಪಂಚಾಯತಿಗಳು, ಜಿಲ್ಲಾ ಪಂಚಾಯತ್ ನಿಧಿಯಿಂದ ಭರಿಸುವುದು ಮುಂದುವರಿಯುತ್ತದೆ.

7. ಕರ್ನಾಟಕ 20 ಅಂಶಗಳ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಿಗೆ ಸರ್ಕಾರಿ ಆದೇಶ ಸಂ:ಪಿಡಿ 34 ಸಿಇಪಿ 89, ದಿನಾಂಕ:26.4.90 ಮತ್ತು ಸರ್ಕಾರಿ ಆದೇಶ ಸಂ:ಪಿಡಿ 235 ಸಿಒಪಿ 93, ದಿನಾಂಕ: 21.2.94ರಲ್ಲಿ 19.12.94ವರೆಗೆ ಹೊರಡಿಸಿದ ಆದೇಶಗಳಲ್ಲಿ ಮಾಡಿದ ಅಧಿಕಾರೇತರ ಸದಸ್ಯರುಗಳ ನಾಮ ನಿರ್ದೇಶನವನ್ನು ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಸ್.ಜಿ.ವಿಮಲ
(ಎಸ್.ಜಿ.ವಿಮಲ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಯೋಜನೆ, ಸಾಂಖ್ಯಿಕ ಡಾಕಾಸು ಮತ್ತು ಸಾಂಖ್ಯಿಕ
ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಇವರಿಗೆ:
1. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ.
2. ಮುಖ್ಯಮಂತ್ರಿಯವರ ಕಾರ್ಯದರ್ಶಿ-2.
3. ಎಲ್ಲಾ ಸಚಿವರ : ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು
4. ರಾಜ್ಯದ ಎಲ್ಲಾ ಸಂಸತ್ ಸದಸ್ಯರುಗಳು(ರಾಜ್ಯ ಸಭೆ ಮತ್ತು ಲೋಕಸಭೆ)
5. ರಾಜ್ಯದ ಎಲ್ಲಾ ವಿಧಾನಮಂಡಲದ ಸದಸ್ಯರುಗಳು
6. ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರುಗಳು
7. ಎಲ್ಲಾ ಜಿಲ್ಲಾ ಪಂಚಾಯತಿಗಳ ಉಪಾಧ್ಯಕ್ಷರುಗಳು
8. ಸರ್ಕಾರದ ಮುಖ್ಯ ಕಾರ್ಯದರ್ಶಿ.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ.
12. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳು.
13. ಎಲ್ಲಾ ವಿಭಾಗಾಧಿಕಾರಿಗಳು.
14. ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು.
15. ಎಲ್ಲಾ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ಕಾರ್ಯನಿರ್ವಾಹಕ ಅಧಿಕಾರಿಗಳು ...6

16. ಎಲ್ಲಾ ಜಿಲ್ಲಾಧಿಕಾರಿಗಳು
17. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
18. ಎಲ್ಲಾ ಉಪ ವಿಭಾಗಾಧಿಕಾರಿಗಳು
19. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಯೋಜನಾ ಅಧಿಕಾರಿಗಳು
20. ಎಲ್ಲಾ ಜಿಲ್ಲಾ ಮಟ್ಟದ ಇಲಾಖಾ ಮುಖ್ಯಸ್ಥರುಗಳು
21. ಎಲ್ಲಾ ಜಿಲ್ಲಾ ಮಟ್ಟದ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯಸ್ಥರುಗಳು
22. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು
23. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಉಪಾಧ್ಯಕ್ಷರುಗಳು
24. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
25. ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳು
26. ಎಲ್ಲಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು
27. ಎಲ್ಲಾ ಜಿಲ್ಲಾ ಪಂಚಾಯಿತಿಗಳ:ತಾಲ್ಲೂಕು ಪಂಚಾಯಿತಿಗಳ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು
28. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು

ಪ್ರತಿಗಳು:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಇವರಿಗೆ ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಮತ್ತು 5000 ಪ್ರತಿಗಳನ್ನು ಸರಬರಾಜು ಮಾಡುವುದಕ್ಕಾಗಿ.

: : : :

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು – 6186